

ವೈಶಾಖಮಾಸದ ಬಸವಳಿಸುವ ಬಿಸಿಲುಧಗೆ. ತಾಸಿಗೋ ಎರಡು ತಾಸಿಗೋ ಒಂದಾವರ್ತಿ ತೋಟದ ತುದಿಯಿಂದ ಒಂದಿಷ್ಟು ತಂಗಾಳಿ ತೂರಿ ಬಂತೆಂದರೆ ಝಿಲ್ಲೆಂದು ಬೆವರುವ ಜೀವಕ್ಕಿಷ್ಟು ನೆಮ್ಮದಿ. ಹೋದ ಮಳೆಗಾಲ ಅನ್ನೋದು ಹೆಸರಿಗಷ್ಟೇ ಮಳೆಗಾಲವಾಗಿತ್ತು. 'ಕಾಲ ಕೆಟ್ಹೋತು, ಜನಗಳ ದುರ್ಬುದ್ಧಿ ಹೆಚ್ಚಾಗಿಯೇ ಈ ಪಾಟಿ ಕೇಡುಗಾಲ ಬಂದಿದ್ದು. ನಮ್ಮ ಕಾಲದಲ್ಲಂತೂ ಹೀಗಿರಲಿಲ್ಲಪ್ಪ' – ಪ್ರಕೃತಿಮಾತೆ ಮುನಿದಾಗಲೆಲ್ಲ ಇಂದಿಗೂ ಹಳ್ಳಿಗಳಲ್ಲಿ ಹಾರಾಡುವ ಹಳಸಲು ಹೇಳಿಕೆಗಳಿವು. ಕರಾವಳಿಯಲ್ಲೇ ಮಳೆಗೆ ಬರಗಾಲವೆನ್ನುವದು ನಂಬಲಿಕ್ಕೇ ಆಗದ ಮಾತು. ಕೆರೆ–ಕುಂಟೆಗಳು, ಬಾವಿಗಳು ಬತ್ತಿಹೋಗಿ ಕುಡಿಯುವ ನೀರಿಗೂ ತತ್ವಾರವಾಗಿ ಹೋದಾಗ ತೋಟದಲ್ಲಿರೋ ಗಿಡ–ಮರಗಳಿಗೆ ನೀರು ಹಾಯಿಸುವುದೆಂತು? ಹಾಗಾಗಿ ಅಡಿಕೆ ಮರಗಳ ಚೆಂಡೆ (ತುದಿಯ ಭಾಗ)ಗಳೆಲ್ಲ ಕೆಂಪು–ಕೆಂಪಾಗಿದ್ದವು. ಅಡಿಕೆ ಪೀಕೂ ಅಷ್ಟೆ. ದರವೂ ಅಷ್ಟಕ್ಕಷ್ಟೆ. ಒಟ್ಟಾರೆ ಇಂದಿಗೂ ರೈತಾಬಿ ಜೀವನ ಕಷ್ಟವೋ ಕಷ್ಟ. ಅನ್ನ, ಮಾವಿನಕಾಯಿ ತಂಬುಳಿ, ಬಸಲೆಸೊಪ್ಪಿನ ಹುಳಿ ಉಂಡು, ಆ ಮೇಲೆ ಒಂದುಲೋಟ ಕೊತ್ತಂಬರಿ ಸೊಪ್ಪು–ಹಸಿಮೆಣಸು ಬೆರೆಸಿದ ದಿವಿನಾದ ಮಜ್ಜಿಗೆ ಕುಡಿದು 'ಢರ್' ಎಂದು ತೇಗಿದ ಹಿರಿಯಣ್ಣ ಹೆಗಲಮೇಲಿನ ಪಂಚೆಗೆ ಕೈ ಒರೆಸಿಕೊಳ್ಳುತ್ತ ಜಗುಲಿಗೆ ಬಂದ. ತಣ್ಣನೆಯ ರೆಡ್ಆಕ್ಸೈಡ್ ನೆಲದ

